(ಇಂದು ದಿನಾಂಕಃ 16–04–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀಸವಾಲು ಃ ಶ್ರೀ ಸಿ ಬಿ ಕೆ ವಕೀಲರಿಂದ ಃ–

22) ನನ್ನ ಸಹೋದರ ಹಸನಸಾಬ ರವರು 04 ವರ್ಷಗಳ ಹಿಂದ ಮರಣ ಹೊಂದಿರುತ್ತಾರೆ. ನನ್ನ ಸಹೋದರ 3 ನೇ ವಾದಿ ಗೊವಾ ರಾಜ್ಯದಲ್ಲಿ ವಾಸವಿರುತ್ತಾರೆ. ನನ್ನ ಸಹೋದರ ಹಸನಸಾಬ ರವರ ಜೀವಿತ ಅವಧಿಯಲ್ಲಿ ಕಾರವಾರದ ಸದಾಶಿವಗಡದ ಒಂದು ದರ್ಗಾದ ಆಡಳಿತ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ಅಲ್ಲಿಯೆ ವಾಸ ಮಾಡುತ್ತಿದ್ದರು.

23) ನಾನು ಮತ್ತು ನನ್ನ ಸಹೋದರರು 18 ವರ್ಷ ವಯಸ್ಸು ಆದ ನಂತರದಲ್ಲಿ ದಾವಾ ಆಸ್ತಿಯ ಸಂಬಂದ ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ. ನನ್ನ ಅಜ್ಜನು ಸಹ ತಮ್ಮ ಜೀವಿತ ಅವಧಿಯಲ್ಲಿ ದಾವಾ ಆಸ್ತಿಯ ಸಂಬಂದ ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ. ದಾವಾ ಆಸ್ತಿಯ ಸಂಬಂದ 1973 ರಲ್ಲಿ ಆದ ಖರೀದಿ ವ್ಯವಹಾರದ ವಿರುದ್ಧ ನಾವು ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ ಎಂದರೆ ಸರಿ ಕಾರಣ ನಮಗೆ ಕಾನೂನು ತಿಳುವಳಿಕೆ ಇರಲಿಲ್ಲ.

24) ಸಾಕ್ಷಿಗೆ ಈಗ ನಿಪಿ–22 ನ್ನು ತೋರಿಸಿ ಅದು ಬಕ್ಷಿಸ ಪತ್ರ ಇರುತ್ತದೆ ಎಂದು ನುಡಿಯುತ್ತಾರೆ. ಬಕ್ಷಿಸ ಪತ್ರದಲ್ಲಿ 5 ಆಸ್ತಿಗಳ ಉಲ್ಲೇಖ ಇರುತ್ತದೆ ಎಂದರ ಸರಿ. ಸದರಿ ಆಸ್ತಿಗಳ ದಾಖಲೆಗಳಲ್ಲಿ ನಮ್ಮ ಹೆಸರನ್ನು ನಮೂದು ಮಾಡಿಸಿರುತ್ತೇವೆ. ಸದರಿ ಆಸ್ತಿಗಳಲ್ಲಿ ಅಂಗಡಿ ಇರುವ ಸಿಟಿಎಸ್ ಸರ್ವೆ ಸಂಖ್ಯೆ 2554 ನ್ನು ಮಾರಾಟ ಮಾಡಿರುತ್ತೇವೆ. ಯಾರಿಗೆ ಮಾರಾಟ ಆಗಿದ್ದು ಗೊತ್ತಿಲ್ಲ. ನಾನು ಮಾರಾಟ ಕಾಗದ ಪತ್ರವನ್ನು ನೊಡಿಲ್ಲ ಆದರೆ ಉತಾರನ್ನು ನೋಡಿರುತ್ತೇನೆ ಉತಾರಗಳಲ್ಲಿ ನಮ್ಮ ಹೆಸರು ಇರುತ್ತದೆ. ಖರೀದಿ ಪಡೆದವರ ವಿರುದ್ಧ ಯಾವುದೇ ದಾವೆ ಸಲ್ಲಿಸಿಲ್ಲ.

25) ದಾಖಲೆಗಳಲ್ಲಿ ಕಾಗದ ಪತ್ರ ಬರೆದ ಸಮಯದಲ್ಲಿ ನಮ್ಮ ಹೆಸರನ್ನು ನಮೂದು ಮಾಡಿಸಿರುತ್ತೇವೆ. ದಾವಾ ಆಸ್ತಿಗಳ ಕಾಗದ ಪತ್ರಗಳನ್ನು ಅವಶ್ಯಕತೆ ಇದ್ದಾಗ ಕಂದಾಯ ಅಧಿಕಾರಿಗಳಿಂದ ಪಡೆದುಕೊಂಡಿರುತ್ತೇವೆ. ದಾವಾ ಆಸ್ತಿಯ ಸಂಬಂದ ಕರ ಪಾವತಿ ಮಾಡಿರುತ್ತೇವೆ. ಕರ ಪಾವತಿ ಮಾಡಿದ ಬಗ್ಗೆ ರಶೀದಿಗಳು ನನ್ನ ಸಹೋದರನಾದ ಹಸನಸಾಬ್

ರವರ ಹಿರಿಯ ಮಗನ ಹತ್ತಿರ ಇರುತ್ತವೆ. ಅವುಗಳನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಲು ತೊಂದರೆ ಇಲ್ಲಾ.

26) ಸಾಕ್ಷಿಗೆ ಈಗ ದಾವಾ ಆಸ್ತಿಗಳ ಸಂಬಂದ ರಶೀದಿಗಳನ್ನು ತೋರಿಸಿ ಅದರಲ್ಲಿ ಪ್ರತಿವಾದಿಯು ಕರವನ್ನು ಪಾವತಿಸಿದ ಬಗ್ಗೆ ರಶೀದಿಗಳು ಇರುತ್ತವೆ ಎಂದರೆ ಸರಿ. ಸದರಿ ಕರ ಪಾವತಿ ರಸೀದಿಗಳನ್ನು ಕ್ರಮವಾಗಿ ನಿ.ಡಿ.**3** ರಿಂದ ನಿ.ಡಿ.**8** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಅದು ಪ್ರತಿವಾದಿಯರಿಗೆ ದಾವಾ ಆಸ್ತಿಗಳ ಸಂಬಂದ ಕಂದಾಯ ಇಲಾಖೆಯಿಂದ ನೀಡಿದ ಬೋನಾಪೈಡ್ ದೃಡಿಕೀರಣ ಪತ್ರ ಎಂದರೆ ಸರಿ. ಸದರಿ ಪತ್ರವನ್ನು ನಿ.ಡಿ.**9** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ 02 ದಾಖಲೆಗಳನ್ನು ತೋರಿಸಿ ಅದು ಬ್ಯಾಂಕ ಆಪ್ ಬರೋಡಾ ರವರು ದಾವಾ ಆಸ್ತಿಯ ಸಂಬಂದ ಪ್ರತಿವಾದಿಯರಿಗೆ ಸಾಲವನ್ನು ನೀಡಿದ ಬಗ್ಗೆ ಇರುವ ಪತ್ರ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಾಲದ ಬಗ್ಗೆ ನನ್ನ ತಾಯಿಗೆ ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಕ್ರಮವಾಗಿ ನಿ.ಡಿ.**10** ಮತ್ತು ನಿ.ಡಿ.**11** ಎಂದು ಗುರುತಿಸಲಾಯಿತು.

27) ಸಾಮಾನ್ಯವಾಗಿ ಬ್ಯಾಂಕಿನವರು ಸಾಲ ನೀಡುವ ಪೂರ್ವದಲ್ಲಿ ದಾಖಲೆಗಳನ್ನು ಪರಿಶೀಲನೆ ಮಾಡಿ ಸ್ಥಾನಿಕ ಪರಿಶೀಲನೆ ಮಾಡಿ ಸಾಲವನ್ನು ನೀಡುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸಾಲ ಪಡೆಯಬಹುದು ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

28) ದಾವಾ ಜಮೀನಿಗೆ ಸಂಬಂದ ಪಟ್ಟಂತೆ ಉಳುಮೆ ಮಾಡಲು ಸರ್ಕಾರದಿಂದ ಸಹಾಯ ಧನ ಬರುತ್ತದೆ ಎಂದರೆ ಸರಿ. ಅದೇ ರೀತಿ ಬೆಳೆಯ ವಿಮೆಯನ್ನು ಸಹ ನೀಡುತ್ತಾರೆ ಎಂದರೆ ಸರಿ. ಸದರಿ ಸಹಾಯ ಧನವನ್ನು ನಾನು ಪಡೆದಿರುವುದಿಲ್ಲ ಕಾರಣ ನನ್ನ ಕೆಲಸದ ನಿಮಿತ್ತ ನಾನು ಬೇರೆ ಊರಿನಲ್ಲಿ ವಾಸ್ತವಾಗಿದ್ದು ಮತ್ತು ಸದರಿ ಸೌಲಭ್ಯಗಳು ಹಾಲಿ ಪ್ರಾರಂಭವಾಗಿದ್ದು ಇರುತ್ತದೆ. ಪ್ರತಿವಾದಿಯು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿದ್ದ ಕಾರಣ ಆತನು ಸದರಿ ಸೌಲಭ್ಯಗಳನ್ನು ಅನುಬೋಗ ಮಾಡುತ್ತಾ ಬಂದಿರುತ್ತಾನೆ ಎಂದರೆ ಪಡೆದುಕೊಂಡಿರಬಹುದು ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿ ಪ್ರತಿವಾದಿಯು 2016–17 ನೇ ಇಸವಿಯಲ್ಲಿ ದಾವಾ ಆಸ್ತಿಯ ಸಂಬಂದ ಬೆಳೆ ವಿಮೆಯನ್ನು ಪಡೆದುಕೊಂಡಿರುತ್ತಾನೆ ಎಂದರೆ ಪಡೆದುಕೊಂಡಿರಬಹುದು. ಸದರಿ ದಾಖಲೆಯನ್ನು ಕ್ರಮವಾಗಿ ನಿ.ಡಿ.**12** ರಿಂದ ನಿ.ಡಿ.**14** ಎಂದು ಗುರುತಿಸಲಾಯಿತು.

29) ದಾವಾ ಆಸ್ತಿಯು ಪ್ರತಿವಾದಿಯರ ಕಬ್ಜಾ ವಹಿವಾಟಿನಲ್ಲಿ, ಮಾಲೀಕತ್ವದಲ್ಲಿ ಇದ್ದು ನಮಗೆ ಅದರ ಬಗ್ಗೆ ಮಾಹಿತಿ ಇದ್ದು ನಾವು ಸುಳ್ಳು ಕಾರಣಗಳನ್ನು ತೋರಿಸಿ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

30) ದಿನಾಂಕ 07–08–2019 ರಂದು ನಾವು ದಾವಾ ಆಸ್ತಿಗೆ ಹೋದ ಸಮಯದಲ್ಲಿ ನಮಗೆ ಅಡತಡೆ ಮಾಡಿದವರ ವಿರುದ್ಧ ಯಾವುದೇ ದೂರು ನೀಡಿಲ್ಲ. ಸದರಿ ದಿನಾಂಕದಂದು ನಾವು ದಾವಾ ಆಸ್ತಿಗೆ ಹೋಗಿಲ್ಲ ಅಲ್ಲಿ ಯಾವುದೇ ಅಡೆತಡೆ ಸಹ ಆಗಿಲ್ಲ ಅಂದರೆ ಸರಿಯಲ್ಲ.

31) ನಾವು ಯಾವತ್ತಿಗೂ ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇಲ್ಲ, ಪ್ರತಿವಾದಿ ಅದರ ಕಬ್ಜಾ ವಹಿವಾಟಿನಲ್ಲಿದ್ದು ದಾವೆಯಲ್ಲಿ ನಾವು ಸುಳ್ಳು ನುಡಿದಿರುತ್ತೇವೆ ಅಂದರೆ ಸರಿಯಲ್ಲ. 1970 ರಲ್ಲಿ ಪ್ರತಿವಾದಿಗೆ ಸುಮಾರು 13 ವರ್ಷ ವಯಸ್ಸು ಆಗಿರಬಹುದು. 1970 ರಲ್ಲಿ ಪ್ರತಿವಾದಿಯು ನಮ್ಮ ಹೆಸರನ್ನು ದಾವಾ ಆಸ್ತಿಯ ದಾಖಲೆಗಳಲ್ಲಿ ನಮೂದು ಮಾಡಲು ತಕರಾರು ಮಾಡಿಸಿದ ಬಗ್ಗೆ ನನ್ನ ವಾದ ಪತ್ರದಲ್ಲಿ ನಮೂದು ಮಾಡಿಲ್ಲ.

32) ಪ್ರಸ್ತುತ ದಾವಾ ಆಸ್ತಿಯ ಮಾರುಕಟ್ಟೆ ಬೆಲೆ 20 ರಿಂದ 25 ಲಕ್ಷ ರೂಪಾಯಿ ಇದೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 10 ರಿಂದ 12 ಲಕ್ಷ ರೂಪಾಯಿ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರಿಗೆ ಮೋಸ ಮಾಡಲು ಮತ್ತು ಆರ್ಥಿಕ ನಷ್ಟ ಮಾಡಿ ಅವರಿಂದ ಹೆಚ್ಚಿನ ಹಣ ಸುಲುಗೆ ಮಾಡಲು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಅಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿ ಅಲ್ಪವಯಿ ಸಂರಕ್ಷಣಾದಾರರಿಗೆ ನೇಮಕ ಮಾಡಲು ಕಾನೂನು ಆದೇಶ ಪಡೆಯಬೇಕು ಎಂದು ಯಾವುದೇ ನಿಯಮ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

33) ನಿಪಿ–22 ರ ಮೂಲ ಪ್ರತಿಯು ನನ್ನ ಅಜ್ಜನ ಬಳಿ ಇದ್ದು ನಮಗೆ ಅವರು ಮನೆಯಿಂದ 1975 ರಲ್ಲಿ ಹೊರಹಾಕಿರುತ್ತಾರೆ. ನನ್ನ ಬಳಿ ಇರುವುದಿಲ್ಲ. ಸರ್ವೆ ಸಂಖ್ಯೆ 89 ರ ವಿಸ್ತೀರ್ಣ 04 ಎಕ್ರೆ 35 ಗುಂಟೆಗೆ ಸಂಬಂದ ಪಟ್ಟಂತೆ ಮಾನ್ಯ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 181/2019 ದಾಖಲಿಸಿರುತ್ತೇವೆ ಎಂದರೆ ಸರಿ. ಸದರಿ ದಾವೆಯ ವಾದ ಪತ್ರದ ದೃಡಿಕೃತ ಪ್ರತಿಯನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು <u>ನಿ.ಡಿ.**15**</u> ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ನಾನು ಸಾಕ್ಷ್ಯ ನುಡಿದ ಬಗ್ಗೆ ಸಾಕ್ಷಿಗೆ ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಹಾಗೂ

ಪಾಟೀಸವಾಲಿನ ದೃಡಿಕೃತ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಡಿ.**16** ಎಂದು ಗುರುತಿಸಲಾಯಿತು.

34) ನಮಗೆ ದಾವಾ ಪರಿಹಾರ ಪಡೆಯಲು ಯಾವುದೇ ಕಾನೂನು ಅರ್ಹತೆ ಇರುವುದಿಲ್ಲ ಅಂದರೆ ಸರಿಯಲ್ಲ. ನಾನು ಆರಕ್ಷಕ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು ಕಾನೂನಿನ ಸಾಮಾನ್ಯ ಜ್ಞಾನವಿದ್ದು ನನ್ನ ವೃತ್ತಿಯ ದುರ್ಬಳಕೆ ಮಾಡಿ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**